ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/10/ಸಿಸಿಟೆಕ್/2017-18 / 581

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001
ದಿನಾಂಕ:07-06-2017

**-: ಸುತ್ತೋಲೆ :-**

ವಿಷಯ: ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಸಿಸಿಟೆಕ್ ಉಪಘಟಕಗಳಲ್ಲಿ ನಡೆಸಲಾದ ಕಾರ್ಯಕ್ರಮಗಳ ಮಾಹಿತಿ ಒದಗಿಸುವ ಬಗ್ಗೆ.

*****

ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಅಧೀನಕ್ಕೆ ಒಳಪಡುವ ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಸಿಸಿಟೆಕ್ ಉಪಘಟಕಗಳಲ್ಲಿ ನಡೆಸಲಾದ ಅಲ್ಪಾವಧಿ ತರಬೇತಿ/ ಕಾರ್ಯಕ್ರಮ / ಇತರೆ ಕಾರ್ಯಚಟುವಟಿಕೆಗಳ ಮಾಹಿತಿಯನ್ನು ಅತಿ ಶೀಘ್ರದಲ್ಲಿ ನಡೆಸಲು ಉದ್ದೇಶಿಸಿರುವ ಕೇಂದ್ರಘಟಕದ ಕಾರ್ಯಕಾರಿಣಿ ಸಭೆಗೆ ಮಂಡಿಸಲು ಅಗತ್ಯವಾಗಿರುವ ಈ ಕೆಳಕಂಡ ಮಾಹಿತಿಗಳನ್ನು ಜರೂರಾಗಿ ನಿರ್ದೇಶನಾಲಯಕ್ಕೆ ಒದಗಿಸಲು ಈ ಮೂಲಕ ಸೂಚಿಸಲಾಗಿದೆ.

1) ಸಿಸಿಟೆಕ್ ಉಪಘಟಕ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ ನಿರ್ವಹಿಸಿರುವ ಕಾರ್ಯಚಟುವಟಿಕೆಗಳ ಸಂಪೂರ್ಣ ಮಾಹಿತಿಯನ್ನೊಳಗೊಂಡ ವರದಿ.

2) ಸಿಸಿಟೆಕ್ ಉಪಘಟಕ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ ವಿಶೇಷ ಸಾಧನೆ / ಅಭಿವೃದ್ಧಿಗಳನ್ನು ಮಾಡಿದ್ದಲ್ಲಿ ಸಂಪೂರ್ಣ ಮಾಹಿತಿಯನ್ನೊಳಗೊಂಡ ವರದಿ.

3) ಸಿಸಿಟೆಕ್ ಉಪಘಟಕ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ ಯಾವ ಯಾವ ರೀತಿಯ ತರಬೇತಿಗಳನ್ನು ನೀಡಿರುತ್ತವೆ, ತರಬೇತಿ ಪಡೆದವರಲ್ಲಿ SC / ST / ಮಹಿಳೆಯರು ಮತ್ತು ಇತರೆ ವರ್ಗದವರ ಸಂಪೂರ್ಣ ಮಾಹಿತಿ.

ಜಂಟಿ ನಿರ್ದೇಶಕರು(ಸಿಡಿಸಿ)
7/6/17

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಇ-ಆಡಳಿತ ವಿಭಾಗ, ತಾಂ.ಶಿ.ನಿ, ಬೆಂಗಳೂರು, ಡಿ.ಟಿ.ಇ. ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.